| | | | |
|---|---|---|---|
| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 1211/2023 | | |
| | | ಸಿ.ಡಬ್ಲೂ | 5 |
| | | ಪಿ.ಡಬ್ಲೂ | 1 |
| ಸಾಕ್ಷಿದಾರರ ಹೆಸರು | ಜೋಸ್ ಬಿನ್ ಮಾಥ್ಯೂ | | |
| ವಯಸ್ಸು | 67 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಕೇರಣ | | |

**ದಿನಾಂಕಃ- 08.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ಈ ಪ್ರಕರಣದ ಸಾಕ್ಷಿದಾರರ ಪರಿಚಯ ಇಲ್ಲ. ಆರೋಪಿತನ ಪರಿಚಯ ಇದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ದಿಃ- **18.12.2022** ರಂದು ರಾತ್ರಿ **07.15** ರ ಸಮಯದಲ್ಲಿ ಚನ್ನಪಟ್ಟಣ, ಬೈರಾಪಟ್ಟಣ- ತಿಟ್ಟಮಾರನ ಹಳ್ಳಿ ಬಳಿ ಇರುವ ರೈಲ್ವೇ ಬ್ರಿಡ್ಜ ಮುಂಭಾಗ ಚಾಸಾ-**2** ರವರು ಕೆಎ-**4** ಎಂ.ಪಿ.**4146** ನೇದ್ದರ ಕಾರಿನಲ್ಲಿ ಚಾಸಾ-**3** ಮತ್ತು **4** ರವರನ್ನು ಕೂರಿಸಿಕೊಂಡು ಬೆಂಗಳೂರು ಕಡೆಗೆ ಹೋಗುವಾಗ ನಾನು, ಚಾಸಾ-**6** ಮತ್ತು **7** ರವರು ಅರೋಪಿತರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಆರ್.ಜೆ.**45**ಸಿಜೆ **-8493** ನೇದ್ದರ ಕಾರಿನಲ್ಲಿ ಚಾಸಾ-

**7** ರವರ **5** ವರ್ಷದ ಮಗುವಿನ ಜೊತೆಗೆ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಆ ವೇಳೆಗೆ ಆರೋಪಿತರನು ತನ್ನ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬಲಭಾಗದ ರಸ್ತೆ ವಿಭಜಕಕ್ಕೆ ಡಿಕ್ಕಿ ಪಡಿಸಿದ ಪರಿಣಾಮನಾವು ಹೋಗುತ್ತಿದ್ದ ಕಾರು ಮಗುಚಿ ಬಿದ್ದುಮುಂದೆ ಹೋಗುತ್ತಿದ್ದ ಚಾಸಾ-**2** ರವರ ಕಾರಿಗೆ ಡಿಕ್ಕಿ ಆಗಿತ್ತು ಎಂದರೆ ಸರಿಯಲ್ಲ. ಆ ರೀತಿ ಅಪಘಾತ ಆದಾಗ ನನಗೆ, ಚಾಸಾ-**6** ಮತ್ತು **7** ರವರಿಗೆ ಹಾಗೂ ಚಾಸಾ-**2** ರವರ ಕಾರಿನಲ್ಲಿ ಚಾಸಾ-**3** ಮತ್ತು **4** ರವರಿಗೆ ಪೆಟ್ಟುಗಳು ಆಗಿತ್ತು ಎಂದರೆ ಸರಿಯಲ್ಲ. ಅಪಘಾತದಲ್ಲಿ ನಮ್ಮ ಜೊತೆ ಕಾರಿನಲ್ಲಿ ಇದ್ದ ನನ್ನಹೆಂಡತಿ ಸ್ಟೈನಿ ಜೋಸ್ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅಪಘಾತವು ಆರೋಪಿತನ ತಪ್ಪಿ ನಿಂದ ಆಗಿದೆ ಎಂದರೆ ಸರಿಯಲ್ಲ. ಆರೋಪಿತ ನನಗೆ ಪರಿಚಯ ಇದ್ದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಲ್ಲಾ ವಿಚಾರಗಳ ಕುರಿತು ದಿಃ**16.01.2023** ರಂದು ಈಗ ಓದಿ ಹೇಳಿದಂತ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ.